ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ತಿದ್ದುಪಡಿ) ವಿಧೇಯಕ, 1997

(ಪರ್ಯಾಲೋಚನಾ ಪ್ರಸ್ತಾವ)

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ) : ಮಾನ್ಯ ಅಧ್ಯಕ್ಷರೇ, 1997ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ) ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡ್‌ನ್ನು ನಾವು ಕೈಗಾರಿಕೆ ಸಲುವಾಗಿ ಲ್ಯಾಂಡ್ ಅಕ್ವೈರ್ ಮಾಡುತ್ತೇವೆ. ಇವತ್ತು ಏರಿಯಾ ಡೆವಲಪ್‌ಮೆಂಟ್‌ಗೆ ಒಂದು ಒಳ್ಳೆಯ ಹೆಸರನ್ನು ಇಡೀ ದೇಶದಲ್ಲೇ ಪಡೆದುಕೊಂಡಿದೆ. ಮೊನ್ನೆ ಮೊನ್ನೆ ಕೇಂದ್ರ ಸರ್ಕಾರ ಇದಕ್ಕೆ ಐಎಸ್‌ಓ-1001 ಸರ್ಟಿಫಿಕೇಟ್ ಅನ್ನು ಕೊಟ್ಟಿದ್ದಾರೆ. ಇಡೀ ದೇಶದಲ್ಲಿ ಸರ್ಕಾರಿ ಸ್ವಾಮ್ಯತ್ವದಲ್ಲಿ ಇದು ಮೊದಲನೇ ಸಂಸ್ಥೆ ಇವತ್ತು ಏನಾಗುತ್ತಿದೆ ಎಂದರೆ, ಉದಾರೀಕರಣ ನೀತಿ 1991ರಲ್ಲಿ ಬಂದನಂತರ ಹಲವಾರು ಇನ್‌ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್‌ಗಳು ಬರುತ್ತಿವೆ. ಮುಖ್ಯವಾಗಿ ಸಿಟ್ರಪ್ಸ್, ಎಕ್ಸಪ್ರೆಸ್ ಹೈವೇಸ್, ಮಾರ್ಕೆಟಿಂಗ್, ಬ್ಯಾಂಕಿಗೆ ಇದನ್ನು ಮಾಡುವಾಗ ಈ ಮುಂಚೆ ನಾವು ಏನು ಮಾಡುತ್ತಿದ್ದೆವು ಎಂದರೆ ಇಂಡಸ್ಟ್ರಿಯಲ್ ಏರಿಯಾ ಮತ್ತು ಏರ್‌ಪೋರ್ಟ್ಸ್ ಮಾಡಬಹುದು ಎಂದು ಹೈಕೋರ್ಟಿನಲ್ಲಿ ಆ ಪ್ರಕಾರ ಆಜ್ಞೆ ಆಯಿತು. ಆದರೆ ಬೇರೆ ಏನು ಇಂಡಸ್ಟ್ರಿಯಲ್ ಪಾಲಿಸಿ ಇದೆ ಅದರ ಪ್ರಕಾರ ಏರ್‌ಪೋರ್ಟ್ಸ್, ಎಕ್ಸಪ್ರೆಸ್‌ವೇ ಮಾಡಬೇಕಾದರೆ ಅದಕ್ಕೆ ಒಂದು ತಿದ್ದುಪಡಿ ಅವಶ್ಯಕತೆ ಇದೆ. ಹಾಗಾಗಿ ಇದು ಒಂದು ಸಾಧಾರಣವಾದ ತಿದ್ದುಪಡಿ. ಇದರಲ್ಲಿ ಇನ್‌ಫ್ರಾಸ್ಟ್ರಕ್ಚರ್ ಸೇರಿಸುವುದು ಅಷ್ಟೇ ಇರುವುದೇ ಹೊರತು ಬೇರೆ ಏನೂ ಇಲ್ಲ. ಇದಕ್ಕೆ ಸಭೆ ಒಪ್ಪಿಕೊಳ್ಳಬೇಕಾಗಿ ಕೋರುತ್ತೇನೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಬಿ.ಎ.ಸಿ. ನಲ್ಲಿ ಒಂದು ವಿಧೇಯಕ ಬಿಟ್ಟರೆ ಬೇರೆ ಯಾವುದೂ ತೆಗೆದುಕೊಳ್ಳುವುದು ಬೇಡವೆಂದು ತೀರ್ಮಾನವಾಗಿತ್ತು..

ಅಧ್ಯಕ್ಷರು : ಇದು ಬಹಳ ಸಿಂಪಲ್ ಇದೆ. ರಾಜ್ಯದ ಹಿತದೃಷ್ಟಿಯಿಂದ ಇರುವುದರಿಂದ ತಾವೆಲ್ಲರೂ ಸಹಕರಿಸಿ.

ಶ್ರೀ ಆರ್. ವಿ. ದೇಶಪಾಂಡೆ : ಹಲವಾರು ಪ್ರಾಜೆಕ್ಟ್‌ಗಳನ್ನು ನಾವು ಕ್ಲಿಯರ್ ಮಾಡಿದ್ದೇವೆ. ಆದರೆ ಈ ತಿದ್ದುಪಡಿಯಿಲ್ಲದ ಕಾರಣ ಕೆಲವು ಯೋಜನೆಗಳು ಹೆಲ್ಡ್‌ಅಪ್ ಆಗುತ್ತವೆ, ಎರಡು-ಮೂರು ತಿಂಗಳು ನಿಧಾನವಾಗುತ್ತದೆ..

ಅಧ್ಯಕ್ಷರು : ಏನಾಗುತ್ತಿದೆ ಎಂದರೆ, ನಾಳೆ ಸದನದಲ್ಲಿ ನಾವು ಮುಂದೂಡಿದರೆ ಒಂದೂವರೆ ತಿಂಗಳ ಕಾಲ ನಿಧಾನವಾಗುತ್ತದೆ. ಆದ್ದರಿಂದ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಇದನ್ನು ಮಾಡುವುದು ಒಳ್ಳೆಯದು.

ಪ್ರಸ್ತಾವ ಏನೆಂದರೆ

1997ನೇ ಸಾಲಿನ ಕರ್ನಾಟಕ ಕೈಗಾರಿಕಾಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 6ರವರೆಗೆ

ಅಧ್ಯಕ್ಷರು : ಖಂಡ 2ರಿಂದ 6ರವೆಗೆ ಎರಡೂ ಸೇರಿದಂತೆ, ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 6, ಎರಡೂ ಸೇರಿದಂತೆ, ವಿಧೇಯಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

'ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ) : ಮಾನ್ಯ ಅಧ್ಯಕ್ಷರೇ, '1997ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವಂತೆ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

'1997ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಮಾನ್ಯ ಕನ್ನಡ, ಸಂಸತಿ ಸಚಿವರು ಹೇಳಿಕೆಯನ್ನು ಓದಿಬಿಡಿರಿ. 'ಧರ್ಮಕಾರಣ' ಕಾದಂಬರಿ ವಿಚಾರದಲ್ಲಿ ಸರ್ಕಾರದ ಪರವಾಗಿ ಅವರು ಒಂದು ಹೇಳಿಕೆಯನ್ನು ಮಾಡುತ್ತಾರಂತೆ.

11) ಮಂತ್ರಿಗಳ ಹೇಳಿಕೆ

ವಿಷಯ : "ಧರ್ಮಕಾರಣ ಕೃತಿಯನ್ನು ಮುಟ್ಟುಗೋಲು ಹಾಕಿದ ಬಗ್ಗೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸತಿ ರಾಜ್ಯ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಈ ಹಿಂದೆ ನಿನ್ನೆ ದಿವಸ ಮೇಲ್ಮನೆಯಲ್ಲಿ ಧರ್ಮಕಾರಣ ಕೃತಿ ಬಗ್ಗೆ ಇವತ್ತು ಹೇಳಿಕೆ ಕೊಡಬೇಕೆಂದು ಹೇಳಿದ್ದರು. ಹಾಗೂ ಇವತ್ತು ಬೆಳಿಗ್ಗೆ ಇಲ್ಲಿ ಮಾನ್ಯ ಸದಸ್ಯರಾದಂಥ ಶ್ರೀ ಚಂದ್ರಕಾಂತ ಬೆಲ್ಲದ್ ಅವರು ಕೇಳಿದ ಪ್ರಕಾರ ಇವತ್ತು ಸಾಯಂಕಾಲ ನಾನು ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದೆ. ಅದರ ಪ್ರಕಾರ ಸರ್ಕಾರದ ವತಿಯಿಂದ ಈಗಾಗಲೇ ಮೇಲ್ಮನೆಯಲ್ಲಿ ಹೇಳಿಕೆ ಕೊಟ್ಟಿದ್ದು ಈ ಮನೆಯಲ್ಲಿ ಅದನ್ನೇ ಪುನಃ ತಮ್ಮ ಮುಂದೆ ಹೇಳಿಕೆ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

'ಧರ್ಮಕಾರಣ'- ಡಾ॥ ಪಿ. ವಿ. ನಾರಾಯಣ್ ಅವರ ವಿವಾದಾತ್ಮಕ ಕಾದಂಬರಿ, ಅಲ್ಲಿಯ ಅವಹೇಳನಗಳನ್ನು, ಆ ಅಂಶಗಳನ್ನು ಪರಿಶೀಲಿಸಿ ಸೆಕ್ಷನ್ 95 ಸಿಆರ್‌ಪಿಸಿ ಅಡಿಯಲ್ಲಿ ಡಾ॥ ಪಿ. ವಿ. ನಾರಾಯಣ ಅವರ ವಿವಾದಾತ್ಮಕ ಕಾದಂಬರಿ 'ಧರ್ಮಕಾರಣ'ವನ್ನು ಮುಟ್ಟುಗೋಲು ಹಾಕಲು ಅಧಿಸೂಚನೆಯನ್ನು ಸರ್ಕಾರ ಹೊರಡಿಸುತ್ತದೆ.

ಅಧ್ಯಕ್ಷರು : ಆಯಿತು. ಇಷ್ಟೇ ಅಲ್ಲವೆ?